ಹಾಕಿಕೊಳ್ಳಬೇಕೆಂದು, ಡಿ.ಸಿ.ಸಿ. ಬ್ಯಾಂಕುಗಳು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಂಸ್ಥೆಗಳಿಗೆ ಸೂಚನೆ ನೀಡಲಾಗಿದೆ. ಸಹಕಾರಿ ಕೃಷಿ ಪತ್ತಿನ ಸಂಸ್ಥೆಗಳಿಂದ ಬೆಳೆ ಸಾಲ ಪಡೆಯುವ ಅರ್ಹ ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡುಗಳನ್ನು ನೀಡಲಾಗಿದೆ. ಸರ್ಕಾರ ಅಧಿಸೂಚಿತ ಪ್ರದೇಶ ಮತ್ತು ಬೆಳೆಗಳ ಆಧಾರವಾಗಿಟ್ಟಿಕೊಂಡು ಬೆಳೆ ವಿಮೆಯನ್ನು ಮಾಡಿಸಲಾಗುತ್ತಿದೆ. ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ಪಡೆದವರು ಸಂಖ್ಯೆ 1,79,298 ಇರುತ್ತದೆ.

2. ವರದಿಯನ್ನೊಪ್ಪಿಸುವುದು

ಶ್ರೀ ಮನೋಹರ್ ಹೆಚ್. ತಹಸೀಲ್ದಾರ್ (ಉಪಾಧ್ಯಕ್ಷರು) : ಮಾನ್ಯ ಅಧ್ಯಕ್ಷರೆ, ಸದಸ್ಯರುಗಳ ಖಾಸಗಿ ವಿಧೇಯಕಗಳು ಹಾಗೂ ನಿರ್ಣಯಗಳ ಸಮಿತಿ ಅಧ್ಯಕ್ಷನಾದ ನಾನು ವಿಧಾನಸಭೆಯ ಖಾಸಗಿ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಯ ಆರನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

3. ಅರ್ಜಿಗಳನ್ನೊಪ್ಪಿಸುವುದು

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ತುರುವೇಕೆರೆ ತಾಲ್ಲೂಕು ದಬ್ಬೇಘಟ್ಟ ಹೋಬಳಿ ಗೊಟ್ಟಿಕೆರೆ, ಹಿಂದು ಮಾರನಹಳ್ಳಿ ಗ್ರಾಮಗಳ ಮಧ್ಯೆ ಗೊಟ್ಟಿಕೆರೆ ನೀರು ಹರಿಯುವ ಹಳ್ಳಕ್ಕೆ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಒಂದು ಅರ್ಜಿ ಹಾಗೂ ತುರುವೇಕೆರೆ ತಾಲ್ಲೂಕು ದಂಡಿನಶಿವರ ಹೋಬಳಿ ಹರಕಾರನಹಳ್ಳಿ ಹಾಗೂ ದೊಂಕಿಹಳ್ಳಿ ಗ್ರಾಮದ ಜನರಿಗೆ, ಈ ಎರಡೂ ಹಳ್ಳಿಗಳ ಸಂಪರ್ಕ ಸುಮಾರು ವರ್ಷಗಳಿಂದ ಕಡಿದು ಹೋಗಿದೆ ಆ ದೃಷ್ಟಿಯಿಂದ ತಿಮ್ಮಗಾಡುವುದಕ್ಕೆ ಒಂದು ಸೇತುವೆ ನಿರ್ಮಾಣದ ಅಗತ್ಯ ಇದೆ. ಆ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಗಳನ್ನೊಪ್ಪಿಸಲಾಯಿತು.

4. ಪ್ರಕಟಣೆ

ಅಧ್ಯಕ್ಷರು : ದಿನಾಂಕ 8 ನೇ ಮಾರ್ಚ್ 2001 ರಂದು ನಡೆದ ವಿಧಾನಸಭೆ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ವಿಧಾನಸಭೆಯ ಕಾರ್ಯಕಲಾಪಗಳನ್ನು ದಿನಾಂಕ 14ನೇ ಮಾರ್ಚ್ 2001ರವರೆಗೆ ನಡೆಸಿ ತದನಂತರ ದಿನಾಂಕ 20ನೇ ಮಾರ್ಚ್ 2001 ಹಾಗೂ 23 ನೆ ಮಾರ್ಚ್ 2001 ರವರೆಗೆ ನಡೆಸುವುದಕ್ಕೆ ತೀರ್ಮಾನಿಸಲಾಗಿದೆ. ಕಾರ್ಯಕಲಾಪಗಳು ಈ ಕೆಳಕಂಡಂತೆ ಇದೆ.

11ನೇ ಮಾರ್ಚ್ 2001 ರಿಂದ 14 ನೇ ಮಾರ್ಚ್ 2001 ಮತ್ತು 20 ನೇ ಮಾರ್ಚ್ 2001 ರಿಂದ 23ನೇ 2001 ರ ತನಕ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣೆ ಪ್ರಸ್ತಾಪ ಚರ್ಚೆ ಹಾಗೂ ಮುಖ್ಯವಾದ ವಿಧೇಯಕರಗಳನ್ನು ತೆಗೆದುಕೊಳ್ಳಲಾಗುವುದು. ಅದಕ್ಕೆ ಸದನ ಸಮಿತಿಯ ಒಪ್ಪಿಗೆ ಇದೆ ಎಂದು ಭಾವಿಸುತ್ತೇನೆ.